## ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY RESEARCH AND REFERENCE BRANCH

### ಪತ್ರಿಕಾ ತುಣುಕುಗಳು
### PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 13/12/19

# 'ಸುಪ್ರೀಂ' ತೀರ್ಪು ಇನ್ನು ಕನ್ನಡದಲ್ಲಿ ಲಭ್ಯ

13/12/19



ನವದೆಹಲಿ: ಸುಪ್ರೀಂಕೋರ್ಟ್‌ನಲ್ಲಿ ಇತ್ಯರ್ಥವಾಗುವ ಪ್ರಕರಣಗಳ ತೀರ್ಪಿನ ಪ್ರತಿಗಳನ್ನು ಕನ್ನಡ ಸೇರಿ ಭಾರತದ ಪ್ರಮುಖ ಒಂಭತ್ತು ಭಾಷೆಗಳಿಗೆ ಭಾಷಾಂತರಗೊಳಿಸಬಲ್ಲ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಈಗಾಗಲೇ ಆ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಲಾಗಿದೆ ಎಂದು ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್, ರಾಜ್ಯಸಭೆಗೆ ಗುರುವಾರ ತಿಳಿಸಿದರು. ಮೇಲ್ಮನೆಯ ಕಲಾಪದ ಪ್ರಶ್ನೋತ್ತರ ವೇಳೆಯಲ್ಲಿ ಈ ವಿಚಾರ ತಿಳಿಸಿದ ಅವರು, "ಹೊಸ ಸಾಫ್ಟ್‌ವೇರ್, ಕೃತಕ ಬುದ್ಧಿಮತ್ತೆಯಿಂದ ಕಾರ್ಯ ನಿರ್ವಹಿಸು ವಂಥದ್ದಾಗಿದೆ. ಇದರ ಸಹಾಯದಿಂದ ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಸದ್ಯಕ್ಕೆ ಕನ್ನಡ, ಬೆಂಗಾಲಿ, ಅಸ್ಸಾಮಿ, ಹಿಂದಿ, ಮರಾಠಿ, ಒರಿಯಾ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳ ಆಡುಭಾಷೆಯ ಶೈಲಿಗೆ ತರ್ಜುಮೆ ಮಾಡಬಹುದಾಗಿದೆ. ಮುಂದಿನ ದಿನಗಳಲ್ಲಿ ಭಾರತದ ಮತ್ತಷ್ಟು ಭಾಷೆಗಳನ್ನು ಈ ಸಾಫ್ಟ್‌ವೇರ್ ವ್ಯಾಪ್ತಿಗೆ ತರಲಾಗುತ್ತದೆ" ಎಂದರು.